ಕರ್ನಾಟಕ ಸರ್ಕಾರ

# ವಿಶೇಷ ನೇಮಕಾತಿ ಸಮಿತಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಆರೋಗ್ಯ ಸೌಧ, 1ನೇ ಅಡ್ಡ ರಸ್ತೆ, ಮಾಗಡಿ ರಸ್ತೆ, ಬೆಂಗಳೂರು-23.

ಸಂಖ್ಯೆ:ಎಸ್‌ಆರ್‌ಸಿ/08/2017-18(ಭಾಗ) ದಿನಾಂಕ: [illegible]-12-22

ಇವರಿಗೆ,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು,

---------------------ಜಿಲ್ಲೆ

ವಿಷಯ : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಫಾರ್ಮಸಿ ಅಧಿಕಾರಿ ಮತ್ತು ಕಿರಿಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡುವ ಬಗ್ಗೆ

ಉಲ್ಲೇಖ : ಸರ್ಕಾರದ ಪತ್ರ ಸಂಖ್ಯೆ:ಆಕುಕ/330/ಜಿಎಸ್‌ಎಂ/2022, ದಿನಾಂಕ:13.12.2022

>>>><<<

ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ 400 ಫಾರ್ಮಸಿ ಅಧಿಕಾರಿ ಹುದ್ದೆಗಳನ್ನು ಮತ್ತು 150 ಕಿರಿಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ ಹುದ್ದೆಗಳನ್ನು ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಸರ್ಕಾರವು ಉಲ್ಲೇಖಿತ ಪತ್ರದಲ್ಲಿ ಅನುಮೋದನೆ ನೀಡಿದ್ದು, ಈ ಸಂಬಂಧ ಅನುಬಂಧದಲ್ಲಿರುವಂತೆ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಕೂಡಲೇ **ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅಲ್ಪಾವಧಿ ಟೆಂಡರ್** ಅನ್ನು ನಿಯಮಾನುಸಾರ ಕರೆಯುವ ಮೂಲಕ ಹೊರಗುತ್ತಿಗೆ ಆಧಾರದ ಮೂಲಕ ನೇಮಕಾತಿ ಮಾಡಿಕೊಳ್ಳಲು ಸೂಚಿಸಿದೆ. ಸದರಿ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡುವ ಬಗ್ಗೆ ಅನುದಾನವನ್ನು ಖಾಲಿ ಇರುವ ರಾಜ್ಯ ಮತ್ತು ಜಿಲ್ಲಾ ವಲಯದ ಸಂಸ್ಥೆಗಳಲ್ಲಿ ಯಾವ ಲೆಕ್ಕಶೀರ್ಷಿಕೆಗಳಡಿ ಮಂಜೂರಾಗುತ್ತದೆಯೋ ಅದೇ ಲೆಕ್ಕ ಶೀರ್ಷಿಕೆಯ ಉಪ ಲೆಕ್ಕಶೀರ್ಷಿಕೆ 034ರಡಿ ಭರಿಸುವಂತೆ ಹಾಗೂ ಕ್ರಮವಹಿಸಿದ ವರದಿಯನ್ನು ಆಯುಕ್ತಾಲಯಕ್ಕೆ ಸಲ್ಲಿಸಲು ಸೂಚಿಸಿದೆ.

1. **ವಿದ್ಯಾರ್ಹತೆ:-**

| ಕ್ರಮ ಸಂಖ್ಯೆ | ಹುದ್ದೆ ಮತ್ತು ವಿದ್ಯಾರ್ಹತೆ |
|---|---|
| 1 | <u>ಫಾರ್ಮಸಿ ಅಧಿಕಾರಿ:-</u><br>ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಡಿಪ್ಲೊಮಾ ಇನ್ ಫಾರ್ಮಸಿ ಹೊಂದಿರಬೇಕು<br>**ಹಾಗೂ**<br>ಕರ್ನಾಟಕ ಫಾರ್ಮಸಿ ಕೌನ್ಸಿಲ್‌ನಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಸಿರಬೇಕು. |
| 2 | <u>ಕಿರಿಯ ವೈದ್ಯಕೀಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ:</u><br>1. ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಪ್ರಯೋಗಶಾಲಾ ತಂತ್ರಜ್ಞಾನದಲ್ಲಿ 2 ವರ್ಷದ ಕರ್ನಾಟಕ ವೊಕೇಷನಲ್ ಶಿಕ್ಷಣ ಬೋರ್ಡ್‌ನಿಂದ ಡಿಪ್ಲೊಮಾ ಹೊಂದಿರಬೇಕು.<br>**ಅಥವಾ**<br>2. ಪಿ.ಯು.ಸಿ (ವಿಜ್ಞಾನ) ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ಅರೆ-ವೈದ್ಯಕೀಯ ಮಂಡಳಿಯು ನಡೆಸುವ 2 ವರ್ಷದ ಪ್ರಯೋಗಶಾಲಾ ತಂತ್ರಜ್ಞ ತರಬೇತಿ ಹೊಂದಿರಬೇಕು.<br>**ಅಥವಾ**<br>3. ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ಅರೆ ವೈದ್ಯಕೀಯ ಮಂಡಳಿಯು ನಡೆಸುವ 3 ವರ್ಷದ ವೈದ್ಯಕೀಯ ಪ್ರಯೋಗಶಾಲಾ ತಂತ್ರಜ್ಞಾನದಲ್ಲಿ ಡಿಪ್ಲೊಮಾ ಹೊಂದಿರಬೇಕು. |

ಮು.ಪು.ನೋ

# ಅನುಬಂಧ

ಸಂಖ್ಯೆ:ಎನ್‌ಆರ್‌ಹೆಚ್‌ಎಂ/08/2017-18 (ಭಾಗ)

ಫಾರ್ಮಸಿ ಅಧಿಕಾರಿಗಳು ಹಾಗೂ ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅನುಮತಿಸಿರುವ ಹುದ್ದೆಗಳ ವಿವರ.

| ಕ್ರ. ಸಂ. | ಜಿಲ್ಲೆ ಹೆಸರು | ಫಾರ್ಮಸಿ ಅಧಿಕಾರಿ ಹುದ್ದೆಗಳು | ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಹುದ್ದೆಗಳು |
|---|---|---|---|
| 1 | ಬೆಂಗಳೂರು ನಗರ | 00 | 02 |
| 2 | ಬೆಂಗಳೂರು ಗ್ರಾಮಾಂತರ | 00 | 01 |
| 3 | ರಾಮನಗರ | 00 | 04 |
| 4 | ಚಿತ್ರದುರ್ಗ | 21 | 00 |
| 5 | ಕೋಲಾರ | 07 | 04 |
| 6 | ಚಿಕ್ಕಬಳ್ಳಾಪುರ | 06 | 09 |
| 7 | ದಾವಣಗೆರೆ | 16 | 01 |
| 8 | ಶಿವಮೊಗ್ಗ | 22 | 07 |
| 9 | ತುಮಕೂರು | 17 | 09 |
| 10 | ಮೈಸೂರು | 31 | 10 |
| 11 | ಮಂಡ್ಯ | 23 | 10 |
| 12 | ಚಿಕ್ಕಮಗಳೂರು | 28 | 06 |
| 13 | ಚಾಮರಾಜನಗರ | 22 | 11 |
| 14 | ಹಾಸನ | 46 | 08 |
| 15 | ಕೊಡಗು | 15 | 06 |
| 16 | ದಕ್ಷಿಣ ಕನ್ನಡ | 25 | 08 |
| 17 | ಉಡುಪಿ | 15 | 02 |
| 18 | ಬೆಳಗಾವಿ | 08 | 04 |
| 19 | ಬಾಗಲಕೋಟೆ | 02 | 02 |
| 20 | ವಿಜಯಪುರ | 03 | 01 |
| 21 | ಗದಗ | 02 | 02 |
| 22 | ಹಾವೇರಿ | 13 | 07 |
| 23 | ಉತ್ತರ ಕನ್ನಡ | 25 | 11 |
| 24 | ಕಲಬುರಗಿ | 25 | 02 |
| 25 | ಯಾದಗಿರಿ | 08 | 04 |
| 26 | ಕೊಪ್ಪಳ | 03 | 04 |
| 27 | ಬೀದರ್ | 05 | 02 |
| 28 | ರಾಯಚೂರು | 06 | 06 |
| 29 | ಬಳ್ಳಾರಿ | 06 | 07 |
| | **ಒಟ್ಟು** | **400** | **150** |

ಸದಸ್ಯ ಕಾರ್ಯದರ್ಶಿ
ವಿಶೇಷ ನೇಮಕಾತಿ ಸಮಿತಿ ಹಾಗೂ
ಮುಖ್ಯ ಆಡಳಿತಾಧಿಕಾರಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಬೆಂಗಳೂರು.